ಮೂಲ ದಾವಾ ಸಂಖ್ಯೆ 251/2014 ಡಿ ಡಬ್ಲ್ಯೂ 2 ಕೌಲೂರು ಶರಣಪ್ಪ ಬಿನ್ ಲೇಟ್ ಕೌಲೂರು ಬಸವಣ್ಣೆಪ್ಪ

(ದಿನಾಂಕ 17-01-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಮುಂದುವರೆದ ಪಾಟೀ ಸವಾಲು ವಾದಿಗಳ ಪರ ಶ್ರೀ ಹೆಚ್ ಎಸ್ ಎನ್ ವಕೀಲರಿಂದಃ-

6. ನಿಪಿ-1 ರ ಕ್ರಯದ ಕರಾರನ್ನು ವಾದಿಯು ಅದಲು ಬದಲು ಮಾಡಿರುತ್ತಾರೆ ಉಪ ನೊಂದಾವಣಾಧಿಕಾರಿಗಳ ಕಚೇರಿಯಲ್ಲಿ ನೊಂದಾಯಿತ ದಾಖಲಾತಿಯನ್ನು ಅದಲು ಬದಲು ಮಾಡಲು ಬರುವುದಿಲ್ಲವೆಂದರೆ ಸರಿಯಲ್ಲ, ಸಾಕ್ಷಿಯು ಸ್ವಇಚ್ಚೆಯಿಂದ ಮುಂದುವರೆದು ನಿಪಿ-1ರ ದಾಖಲೆಯನ್ನು ಭದ್ರತೆಯ ಸಲುವಾಗಿ ವಾದಿಗೆ ಮಾಡಿಕೊಡಲಾಗಿತ್ತು ಎಂದು ನುಡಿಯುತ್ತಾರೆ. ನಾನು ವಾದಿಗೆ ನಿಪಿ-1ರ ದಾಖಲೆಯನ್ನು ಸ್ವತ್ತಿನ ಮಾರಾಟದ ಉದ್ದೇಶಕ್ಕಾಗಿ ಮಾಡಿಕೊಡಲಾಗಿದ್ದು ಭದ್ರತೆಗಾಗಿ ಮಾಡಿಕೊಟ್ಟಿರುವುದಾಗಿ ಸುಳ್ಳು ಸಾಕ್ಷ್ಯ ಹೇಳುತಿತದ್ದೇನೆಂದರೆ ಸರಿಯಲ್ಲ. ನಾನು, ನನ್ನ ತಾಯಿ, ನನ್ನ ಅಣ್ಣ ನಿಪಿ-1ರ ನೊಂದಾಯಿತ ಕ್ರಯದ ಕರಾರನ್ನು ವಾದಿಗೆ ಬರೆದುಕೊಟ್ಟಿರುತ್ತೇವೆಂದರೆ ಸರಿಯಲ್ಲ. ನಿಪಿ-1ರ ನೊಂದಾಯಿತ ಕ್ರಯದ ಕರಾರನ್ನು ನಾವು ವಾದಿಗೆ ಬರೆದುಕೊಟ್ಟಿದ್ದರೂ ಬರೆದುಕೊಟ್ಟಿರುವುದಿಲ್ಲವೆಂದು ಸುಳ್ಳು ಸಾಕ್ಷ್ಯಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ವಾದಿಗೆ ಮೋಸ ಮಾಡುವ ಉದ್ದೇಶದಿಂದ ದಾವಾ ಸ್ವತ್ತಿನ ನಿಪಿ-1ರ ಕ್ರಯದ ಕರಾರನ್ನು ವಾದಿಗೆ ಬರೆದುಕೊಟ್ಟಿದ್ದರೂ ಭದ್ರತೆಗಾಗಿ ಬರೆದುಕೊಡಲಾಗಿದೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

7. ಪೋಡಿ ನಕಾಶೆ ಮತ್ತು ಪಹಣಿ ದಾಖಲೆಗಳನ್ನು ಸರಿಪಡಿಸಿ ಕ್ರಯಪತ್ರವನ್ನು ಬರೆದುಕೊಡುವಂತೆ ವಾದಿಯು ಹಲವಾರು ಬಾರಿ ನಮ್ಮನ್ನು ಕೇಳಿದ್ದರು ನಾವು ಸದರಿ ದಾಖಲೆಗಳನ್ನು ಸರಿಪಡಿಸದೇ ವಾದಿಯ ಹೆಸರಿಗೆ ಕ್ರಯಪತ್ರವನ್ನು ಬರೆದುಕೊಟ್ಟಿರುವುದಿಲ್ಲವೆಂದರೆ ಸರಿಯಲ್ಲ. ವಾದಿಯು ನೊಂದಾಯಿತ ಕ್ರಯಪತ್ರವನ್ನು ಬರೆದುಕೊಡುವಂತೆ ನನ್ನ ತಾಯಿಗೆ ವಕೀಲರ ಮೂಲಕ ನಿಪಿ-3 ರಂತೆ ಲಿಖಿತ ನೊಟೀಸನ್ನು

ಕೊಟ್ಟಿದ್ದರು ಎಂದರೆ ಸರಿ. ಆ ನೋಟೀಸಿಗೆ ನಾವು ಪ್ರತ್ಯುತ್ತರವನ್ನು ಕೊಟ್ಟಿರುವುದಿಲ್ಲವೆಂದರೆ ಸರಿ, ಸಾಕ್ಷಿ ಸ್ವಇಚ್ಛೆಯಿಂದ ಮುಂದುವರೆದು ವಾದಿಯ ಸಹೋದರನಾದ ಬಾವಿ ಪ್ರಕಾಶ್ ರವರಿಗೆ ನೋಟೀಸನ್ನು ತೋರಿಸಲಾಗಿ ಅವರು ರೂ.2 ಲಕ್ಷ ಹಣವನ್ನು ಕೊಟ್ಟಲ್ಲಿ ಎಲ್ಲವೂ ಸರಿಹೋಗುತ್ತದೆಂದು ಹೇಳಿದ ಕಾರಣ ವಾದಿ ಕೊಟ್ಟಂತಹ ನೋಟೀಸಿಗೆ ಪ್ರತ್ಯುತ್ತರವನ್ನು ಕೊಟ್ಟಿಲ್ಲವೆಂದು ನುಡಿಯುತ್ತಾರೆ. ನಾನು ಈ ವಿಷಯವನ್ನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಬಾವಿ ಪ್ರಕಾಶ್ ರವರ ಬಳಿ ಹೋಗಿಲ್ಲವೆಂದರೆ ಸರಿಯಲ್ಲ.

8. ಪ್ರಸ್ತುತ ದಾವಾ ಸ್ವತ್ತಿನ ಮಾರುಕಟ್ಟೆಯ ಬೆಲೆ ಜಾಸ್ತಿಯಾಗಿರುತ್ತದೆಂದರೆ ಸರಿ. ಪ್ರಸ್ತುತ ದಾವಾ ಸ್ವತ್ತಿನ ಮಾರುಕಟ್ಟೆಯ ಬೆಲೆ ಜಾಸ್ತಿಯಾದ ಕಾರಣ ನಾವು ವಾದಿಗೆ ಮೋಸ ಮಾಡುವ ಉದ್ದೇಶದಿಂದ ಭದ್ರತೆ ಸಲುವಾಗಿ ನಿಪಿ-1ರ ದಾಖಲೆಯನ್ನು ವಾದಿಗೆ ಬರೆದುಕೊಡಲಾಗಿತ್ತು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

9. ಇಂದಿಗೂ ವಾದಿಯು ಉಳಿದ ಪ್ರತಿಫಲದ ಹಣವನ್ನು ಕೊಟ್ಟು ಕ್ರಯಕರಾರು ಮಾಡಿಕೊಳ್ಳಲು ತಯಾರಿರುತ್ತಾರೆಂದರೆ ಸರಿಯಲ್ಲ.

10. ನನ್ನ ತಾಯಿಯು ನಮ್ಮ ಮನೆಯ ಯಜಮಾನಳಾಗಿದ್ದು, ನಾನು ಮತ್ತು ನನ್ನ ಸೋದರ ಮತ್ತು ನನ್ನ ತಾಯಿ ಸೇರಿ ವಾದಿಗೆ ನಿಪಿ-1ರ ಕ್ರಯಕರಾರನ್ನು ಬರೆದುಕೊಟ್ಟಿದ್ದರೂ ಭದ್ರತೆ ಸಲುವಾಗಿ ಬರೆದುಕೊಡಲಾಗಿತ್ತು ಎಂದು ಹಾಗೂ ನನ್ನ ತಾಯಿ ಪ್ರತಿವಾದಿಗೆ ದಾವಾ ಸ್ವತ್ತನ್ನು ಬರೆದುಕೊಡುವಂತಹ ಹಕ್ಕು ಇರಲಿಲ್ಲವೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

11. ನಮ್ಮ ಕುಟುಂಬದ ಉಪಯೋಗಕ್ಕಾಗಿ ದಾವಾ ಸ್ವತ್ತನ್ನು ವಾದಿಗೆ ಮಾರಾಟ ಮಾಡುವ ಉದ್ದೇಶದಿಂದ ನಿಪಿ-1ರ ದಾಖಲೆ ಬರೆದುಕೊಡಲಾಗಿತ್ತು ಎಂದರೆ ಸರಿಯಲ್ಲ. ದಾವಾ

ಸ್ವತ್ತನ್ನು ನಿಪಿ-1 ರಂತೆ ವಾದಿಗೆ ನೊಂದಾಯಿತ ಕ್ರಯ ಕರಾರು ಮಾಡಿಕೊಟ್ಟು ಅವರು ಕೊಟ್ಟಂತಹ ಪ್ರತಿಫಲದ ಹಣವನ್ನು ನಾವೆಲ್ಲಾ ಒಟ್ಟಾಗಿ ಉಪಯೋಗಿಸಿಕೊಂಡಿದ್ದು, ವಾದಿಗೆ ಮೋಸ ಮಾಡುವ ಉದ್ದೇಶದಿಂದ ಪ್ರತಿವಾದಿಯಾದ ನನ್ನ ತಾಯಿಗೆ ದಾವಾ ಸ್ವತ್ತನ್ನು ಮಾರಾಟ ಮಾಡುವ ಹಕ್ಕು ಇರುವುದಿಲ್ಲ ಹಾಗೂ ದಾವಾ ಸ್ವತ್ತಿನಲ್ಲಿ ನಮಗೂ ಪಾಲಿರುವುದಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

12. ನಾನು ಹೋಟೆಲ್ ವ್ಯವಹಾರ ಮಾಡುತ್ತೇನೆಂದರೆ ಸರಿ ಮತ್ತು ನನಗೆ ಸಾಮಾನ್ಯ ವ್ಯವಹಾರ ಜ್ಞಾನ ಇರುತ್ತದೆಂದರೆ ಸರಿ. ನಾನು ನನ್ನ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹೊಟೇಲ್ ವ್ಯವಹಾರ ಮಾಡುತ್ತೇನೆಂದರೆ ಸರಿ. ನಮ್ಮ ಒಟ್ಟು ಕುಟುಂಬದ ನಿರ್ವಹಣೆಗಾಗಿ ದಾವಾಸ್ತಿಯನ್ನು ವಾದಿಗೆ ಮಾರಾಟ ಮಾಡಿರುತ್ತೇನೆಂದರೆ ಸರಿಯಲ್ಲ. ನನಗೆ ನಿಪಿ-1ರ ದಾಖಲೆಯನ್ನು ವಾದಿಗೆ ಬರೆದುಕೊಡುವಾಗ ಸಂಪೂರ್ಣ ವ್ಯವಹಾರ ಜ್ಞಾನವಿದ್ದರೂ ಭದ್ರತೆಗಾಗಿ ಬರೆದುಕೊಡಲಾಗಿತ್ತು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ
ಹಗರಿಬೊಮ್ಮನಹಳ್ಳಿ